**ಸಾಕ್ಷಿಯನ್ನು ದಿಃ 05.02.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವೆರದ ಪಾಟೀ ಸವಾಲುಃ ವಾದಿ ಪರ ಶ್ರೀ.ವಾಯ್ ಆರ್.ಹೆಚ್.ವಕೀಲರಿಂದ.**

ಈ ದಾವೆಯಲ್ಲಿ ನಾನು ಲಿಖಿತ ಹೇಳಿಕೆ ಹಾಕಲು ಯಾವುದೇ ತೊಂದರೆ ಇರಲಿಲ್ಲವೆಂದರೆ ಮತ್ತು ನಾನು ಲಿಖಿತ ಹೇಳಿಕೆ ಸಲ್ಲಿಸಿಲ್ಲವೆಂದರೆ ಸರಿ. ಪ್ರತಿವಾದಿ 1 ಅವರು ಅವರ ಪರವಾಗಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ಪತ್ರವನ್ನು ಬೆರದುಕೊಟ್ಟಿರುವುದಿಲ್ಲ. ನನ್ನ ತಂದೆಯ ಮರಣಾ ನಂತರ ನಾನು ಮತ್ತು ನನ್ನ ತಾಯಿ ಹಾಗೂ ವಾದಿಗಳು ಒಟ್ಟು ಕುಟುಬಂದಲ್ಲಿ ಮುಂದುವರೆದಿರುತ್ತೇವೆ ಎಂದರೆ ಸರಿ. ನನ್ನ ತಾಯಿಯ ಹೆಸರಿಗೆ ಇರುವ ಕ್ರಯ ಪತ್ರಗಳಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ಸದರಿ ಪತ್ರಗಳಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದರೆ ಸರಿಯಲ್ಲ. ಯಾವ ದಿನಾಂಕ, ಯಾರಿಂದ ಎಷ್ಟು ಹಣಕ್ಕೆ ಖರೀದಿ ಮಾಡಿದ್ದಾರೆಂದು ನನಗೆ ಗೊತ್ತು. ಪ್ರತಿವಾದಿ 1 ಮತ್ತು3 ಅವರಿಗೆ ಕ್ರಯ ಪತ್ರಗಳ ಬಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿ ನನಗೆ ಅವರಿಗಿಂತ ಹೆಚ್ಚಿಗೆ ಮಾಹಿತಿ ಇದೆ ಎಂದು ಹೇಳುತ್ತಾರೆ.

ವಾದಿ ಹೆಸರಿಗೆ ಬೆಂಗಳೂರಿನಲ್ಲಿ ಆಸ್ತಿ ಖರೀದಿ ಮಾಡಿದ ಬಗ್ಗೆ ದಾಖಲೆ ಇದೆ ಹಾಜರುಪಡಿಸಿರುವುದಿಲ್ಲ ಸಾಕ್ಷಿ ಹಾಜರುಪಡಿಸುತ್ತೇನೆಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ಖರೀದಿ ಮಾಡಿದ ಆಸ್ತಿಯ ಸರ್ವೆ ನಂ. ಖಾತಾ ನಂ ಮತ್ತು ವಿಸ್ತೀರ್ಣ ಹಾಗೂ ಸ್ವತ್ತಿನ ಸ್ವರೂಪ ನನಗೆ ಗೊತ್ತಿರುವುದಿಲ್ಲ. ಪ್ರತಿವಾದ ಪತ್ರದಲ್ಲಿ ಬರೆದಿರುವ ಸೈಟುಗಳು ನಾನು ನೋಡಿರುತ್ತೇನೆ. ಸದರಿ ಸೈಟುಗಳು ಮರಿಯಪ್ಪನಪಾಳ್ಯ ಮತ್ತು ಹಂಗರಹಳ್ಳಿಯಲ್ಲಿರುತ್ತವೆ. ಸದರಿ ಸ್ವತ್ತಿನ ದಾಖಲೆಗಳು ನನ್ನ ಅಣ್ಣನ ಹೆಸರಿಗೆ ಇರುವ ಬಗ್ಗೆ ನಾನು ನೋಡಿರುವುದಿಲ್ಲ. ನನ್ನ ಅಣ್ಣನ ಹೆಸರಿಗೆ ಇರುವ ಯಾವುದೇ ಆಸ್ತಿ ಇಲ್ಲ ಆದ ಕಾರಣ ನಾನು ನನ್ನ ತಕರಾರಿನಲ್ಲಿ ಹೇಳಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

ನಾವುಗಳೆಲ್ಲರೂ ಒಟ್ಟು ಕುಟುಂಬದಲ್ಲಿ ಮುಂದುವರೆದುಕೊಂಡು ಬಂದ ಕಾರ ದಾವಾ ಸ್ವತ್ತುಗಳು ನನ್ನ ತಾಯಿಯ ಹೆಸರಿಗೆ ಇರುತ್ತವೆ ನಮ್ಮಗಳ ಹೆಸರಿಗೆ ವರ್ಗಾವಣೆ ಆಗಿರುವುದಿಲ್ಲ.

ದಾವಾ ಸ್ವತ್ತುಗಳನ್ನು ನಾನು ಉಳುಮೆ ಮಾಡಕೊಳ್ಳಲು ನನಗೆ ಯಾರು ತೊಂದರೆ ಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ತಾಯಿ ದಾವಾ ಸ್ವತ್ತುಗಳನ್ನು ಉಳುಮೆ ಮಾಡಬೇಡ ಎಂದುತೊಂದರೆ ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಖರೀದಿ ಮಾಡಿದ ಆಸ್ತಿಗಳನುನ ಉಳುಮೆ ಮಾಡಬೇಡ ಎಂದು ಹೇಳಿರುತ್ತಾರೆಂದು ನುಡಿಯುತ್ತಾರೆ. ನನ್ನ ತಾಯಿ ಖರೀದಿ ಮಾಡಿದ ಆಸ್ತಿಗಳನ್ನು ಬೇರೆಯವರಿಗೆ ಉಳುಮೆ ಮಾಡಲು ನೀಡಿರುತ್ತಾರೆ. 10 -15 ವರ್ಷಗಳಿಂದ ಬೇರೆಯವರ ಕಡೆಯಿಂದ ಉಳುಮೆ ಮಾಡಿಸುತ್ತಿದ್ದಾರೆ. ಬೇರೆಯವರ ಕಡೆಯಿಂದ ಖರೀದಿ ಮಾಡಿದ ಆಸ್ತಿಯನ್ನು ನನ್ನ ತಾಯಿ ಉಳುಮೆ ಮಾಡಿಸುತ್ತಿದ್ದಾರೆಂದು ನಾನು ನನ್ನ ತಕರಾರಿನಲ್ಲಿ ಬೆರಸಿರುವುದಿಲ್ಲ.  ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಆದ ಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಯಾವ ಯಾವ ಆಸ್ತಿಗಳು ನನ್ನ ತಾಯಿ ಹೆಸರಿಗೆ ಕ್ರಯ ಪತ್ರದ ಆದಾರದ ಮೇರೆಗೆ ಮತ್ತು ಪಿತ್ರಾರ್ಜಿತವಾಗಿ ಖಾತೆ ಆಗಿರುತ್ತವೆಂದು ತೋರಿಸಲು ಎಂ.ಆರ್ ಅನ್ನು ಹಾಜರುಪಡಿಸಿರುತ್ತೇನೆ. ಸದರಿ ಎಂ ಆರ್ ಅನ್ನು ನಾನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ನನ್ನ ತಾಯಿ ಅವರ ಆಸ್ತಿಗಳನ್ನು ಭೋಗ್ಯ ಮತ್ತು ಕ್ರಯ ಪತ್ರ ಮಾಡಿರುವುದಾಗಿ ತಕರಾರಿನಲ್ಲಿ ಬರೆದಿಲ್ಲವೆಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ಅದೇ ರೀತಿ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ತಾಯಿ ಅವರ ಆಸ್ತಿಗಳನ್ನು ಭೋಗ್ಯ ಮತ್ತು ಕ್ರಯ ಪತ್ರ ಮಾಡಿರುವುದಾಗಿ ತಕರಾರಿನಲ್ಲಿ ಬರೆದಿಲ್ಲವೆಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಆದ ಕಾರಣ ಆ ರೀತಿ ದಾಖಲಾತಿ ಮಾಡಿಲ್ಲವೆಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾನು ಮತ್ತು ಪ್ರತಿವಾದಿ 3 ಮತ್ತು ವಾದಿ ವಾರಸ್ಸುದಾರರು ಆಗಿರುತ್ತವೆ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿಗಳಿಗೆ ಮಾತ್ರ ವಾರಸ್ಸುದಾರರು ಆಗಿರುತ್ತೇವೆಂದು ಹೇಳುತ್ತಾರೆ. ಒಟ್ಟು ಕುಟುಂಬದ ಆಸ್ತಿಗಳನ್ನು ಸಾಲ ಮಾಡಿ ಖರೀದಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ನನ್ನ ತಾಯಿಗೆ ಯಾವುದೇ ಸ್ವಂತ ಆದಾಯ ಇರಲಿಲ್ಲ ಮತ್ತು ದಾವಾ ಸ್ವತ್ತುಗಳನ್ನು ಅವರು ಸ್ವಂತ ಆದಾಯದಿಂದ ಖರೀದಿ ಮಾಡಿಲ್ಲ ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಾಯಿ ಒಡವೆ ಮಾರಿ ದಾವಾ ಆಸ್ತಿಗಳನ್ನು ಖರೀದಿಸಿದ್ದಾರೆಂದು ಹೇಳುತ್ತಾರೆ. ಸದರಿ ವಿಷಯವನ್ನು ನಾನು ತಕರಾರಿನಲ್ಲಿ ಬರೆಸಿಲ್ಲ ಒಂದು ವೇಳೆ ನನ್ನ ತಾಯಿ ದಾವಾ ಸ್ವತ್ತುಗಳನ್ನು ಒಡವೆ ಮಾರಿ ಖರಿದಿ ಮಾಡಿದ್ದರೆ ನಾನು ತಕರಾರಿನಲ್ಲಿ ಬರೆಸುತ್ತಿದ್ದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ನನಗೆ ಮತ್ತು ವಾದಿ ಹಾಗೂ ಪ್ರತಿವಾದಿ 1, 3 ಅವರಿಗೆ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಇತ್ತಿಚೇಗೆ ಆಗಿದ್ದರಿಂದ ದುರುಪಯೋಗ ಪಡಿಸಿಕೊಂಡು ಅವರಿಗೆ ಯಾವುದೇ ಭಾಗ ಇಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ವಾದಿ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ತೆಗೆದುಕೊಂಡು ಹೋಗಬಹುದೆಂದು ಬರೆಸಿರುತ್ತೇನೆ. ದಾವಾ ಸ್ವತ್ತುಗಳಲ್ಲಿ ನಾವು ಒಟ್ಟು ಕುಟುಂಬದಲ್ಲಿ ಇದ್ದು ನಾನೇ ಸದರಿ ಆಸ್ತಿಗಳಲ್ಲಿ ಒಟ್ಟು ಕುಟುಂಬದ ಪರವಾಗಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದೆ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿಗಳನ್ನು ಮಾಡಿತ್ತಿದ್ದು ಕೊಂಡ ಆಸ್ತಿಯನ್ನು ಮಾಡುತ್ತಿಲ್ಲ ಎಂದು ಹೇಳುತ್ತಾರೆ. ವಾದಿ ಯಾವ ವರ್ಷ ಕೆಲಸಕ್ಕೆ ಸೇರಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.